ಶಿಕ್ಷಕರಿಗೆ ಜಿ.ಪಂ.ಸಿಇಒ ರವೀಂದ್ರ ಕರೆ
ಸರಳ ಭಾಷೆಯ ಬೋಧನೆ ತಂತ್ರ ರೂಢಿಸಿಕೊಳ್ಳಬೇಕು

ಚಿತ್ರದುರ್ಗ

ಶಿಕ್ಷಕರು ಪಾಠ ಮಾಡುವ ವಿಧಾನದಿಂದ ಮಕ್ಕಳಿಗೆ ಗಣಿತಕ್ಕಿಂತಲೂ ಕನ್ನಡ ಕಷ್ಟವಾಗಿದೆ. ಆದ್ದರಿಂದ ಅವರಿಗೆ ಅರ್ಥವಾಗುವ ರೀತಿಯಲ್ಲಿ ಸರಳ ಭಾಷೆಯಲ್ಲಿ ಕಲಿಸುವ ತಂತ್ರಗಾರಿಕೆ ರೂಢಿಸಿಕೊಳ್ಳಿ ಎಂದು ಜಿಪಂ ಸಿಇಒ ಪಿ.ಎನ್.ರವೀಂದ್ರ ಶಿಕ್ಷಕ ವೃಂದಕ್ಕೆ ಕಿವಿ ಮಾತು ಹೇಳಿದರು.

ನಗರದ ತರಾಸು ರಂಗಮಂದಿರದಲ್ಲಿ ಸೋಮವಾರ ಕನ್ನಡ ಭಾಷಾ ಶಿಕ್ಷಕರಿಗೆ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಎಸ್ಸೆಸ್ಸೆಲ್ಸಿ ಕನ್ನಡ ವಿಷಯದ ಫಲಿತಾಂಶ ಉತ್ತಮೀಕರಣ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ ಸೂಕ್ತ ಪೂರ್ವ ತಯಾರಿಯಿಂದ ತರಗತಿಗೆ ಬಂದರೆ ಯಾವುದೇ ಸಮಸ್ಯೆಯಾಗುವುದಿಲ್ಲ, ಮಾತೃಭಾಷೆ ಫಲಿತಾಂಶ ಸುಧಾರಣೆಗೆ ಕಾರ್ಯಾಗಾರ ನಡೆಸುವ ಸ್ಥಿತಿ ಎದುರಾಗಿರುವುದು ನಿಜಕ್ಕೂ ಬೇಸರದ ಸಂಗತಿ ಎಂದು ತಿಳಿಸಿದರು.

ಕರ್ತವ್ಯಕ್ಕೆ ಸೇರುವ ತನಕ ಇರುವ ಕಲಿಕಾ ಆಸಕ್ತಿ ಬಳಿಕ ನಿಮ್ಮಿಂದ ದೂರವಾಗುವುದೇ ಫಲಿತಾಂಶ ಹಿನ್ನಡೆಗೆ ಕಾರಣ ಉತ್ತಮ ಅಂಕಗಳಿಸಿದ ಶಿಕ್ಷಕರನ್ನು ಸರ್ಕಾರಿ ಶಾಲೆಗೆ ನೇಮಕ ಮಾಡಿಕೊಂಡರು ಸಹ ಮಕ್ಕಳ ಕಲಿಕೆಯಲ್ಲಿ ಕುಂಠಿವಾಗುತ್ತಿದೆ. ಈ ವಿಚಾರದಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಶಬ್ದಮಣಿ ದರ್ಪಣಂ, ಕವಿರಾಜಮಾರ್ಗ, ಸಂಧಿ, ವ್ಯಾಕರಣ ಕಷ್ಟ ಎಂದ ಹೇಳುವ ಮೂಲಕ ಜೇನು ಸವಿದಷ್ಟು ಸಿಹಿಯಾದ ಕನ್ನಡವನ್ನು ವಿರೋಧಿಸುವ ವಾತಾವರಣ ನಿರ್ಮಿಸಲಾಗಿದೆ. ಆದರೆ, ಈ ಭಾಷೆಯಷ್ಟು ಸರಳ, ಸುಂದರ ಯಾವ ಭಾಷೆಯೂ ಇಲ್ಲ. ಇದನ್ನು ಶಿಕ್ಷಕರು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ಶಿಕ್ಷಣದ ಆವಿಷ್ಕಾರದ ಭರದಲ್ಲಿ ಗೊತ್ತು ಗೊತ್ತಿಲ್ಲದೆ ಕನ್ನಡವನ್ನು ಕಡೆಗಣಿಸಲಾಗುತ್ತಿದೆ. ಪ್ರಾಥಮಿಕ ಭಾಷೆಯನ್ನು ದ್ವಿತೀಯ, ತೃತೀಯವಾಗಿ ಆಯ್ಕೆ ಮಾಡಿಕೊಳ್ಳುವ ಮಟ್ಟಕ್ಕೆ ಪಾಲಕರು ವಾತಾವರಣ ಸೃಷ್ಟಿಸಿದ್ದಾರೆ. ಇದರಿಂದ ಮಕ್ಕಳನ್ನು ಹೊರತಂದು ಭಾಷೆ ಕಲಿಕೆಗೆ ಒತ್ತು ನೀಡಬೇಕು ಎಂದರು.

ಶಾಲೆಯಲ್ಲಿ ಅಧಿಕ ಅಂಕಗಳಿಸುವ ವಿದ್ಯಾರ್ಥಿಗಷ್ಟೇ ಆದ್ಯತೆ ನೀಡುವುದು ಬೆಳೆದು ಬಂದಿದೆ. ಈ ಮನೋಭಾವದಿಂದ ಹೊರಬಂದು ಪ್ರತಿ ವಿದ್ಯಾರ್ಥಿಯೂ ನಮ್ಮ ಮಕ್ಕಳೆಂದು ಭಾವಿಸಿ ಫಲಿತಾಂಶ ಉತ್ತಮಗೊಳಿಸಿ ಎಂದು ಸಲಹೆ ನೀಡಿದರು.

ಇದೇ ವೇಳೆ ಕನ್ನಡ ಪಾಸಿಂಗ್ ಪ್ಯಾಕೇಜ್ ಕೈಪಿಡಿಗಳನ್ನು ಬಿಡುಗಡೆಗೊಳಿಸಲಾಯಿತು. ಕನ್ನಡ ದೀವಿಗೆ ಕರ್ತೃ ಮಹೇಶ್, ರಾಜ್ಯ ಸಂಪನ್ಮೂಲ ಶಿಕ್ಷಕ ಬಿ.ರವೀಶ್ ಕುಮಾರ್, ಸಂಪನ್ಮೂಲ ವ್ಯಕ್ತಿಗಳಾದ ವೆಂಕಟೇಶ್ ಲಕ್ಷಾಣಿ, ಟಿ.ಎಂ.ಬಸವರಾಜು ಅವರನ್ನು ಸನ್ಮಾನಿಸಲಾಯಿತು.

ಫಲಿತಾಂಶ ಉತ್ತಮೀಕರಣಕ್ಕೆ ಕಾರ್ಯ ಯೋಜನೆ, ಪರೀಕ್ಷಾ ಸಿದ್ಧತೆ ಮತ್ತು ಪರೀಕ್ಷಾ ಭಯ ನಿವಾರಣೆ, ವ್ಯಾಕರಣ ಪರಿಚಯ, ಆಶುಕವಿತೆ ವಾಚನ, ಪ್ರಶ್ನೆ ಪತ್ರಿಕೆ ವಿಶ್ಲೇಷಣೆ, ಚಟುವಟಿಕೆಗಳು ಮತ್ತು ತಂತ್ರಜ್ಞಾನ, ಸಂವಾದ ನಡೆಸಲಾಯಿತು.

ಕಾರ್ಯಾಗಾರದಲ್ಲಿ ದಾವಣಗೆರೆ, ಮೈಸೂರು, ಧಾರವಾಡ, ಬಳ್ಳಾರಿ, ವಿಜಯಪುರ, ಬಾಗಲಕೋಟೆ, ತುಮಕೂರು, ಬೆಳಗಾಂ, ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಶಿಕ್ಷಕರು ಭಾಗವಹಿಸಿದ್ದರು.

ಡಿವೈಪಿಸಿ ಎ.ಕೆ.ಕೆಂಗಪ್ಪ, ಕನ್ನಡ ವಿಷಯ ಪರಿವೀಕ್ಷಕ ಎಚ್.ಚಂದ್ರಹಾಸ, ರಾಜ್ಯ ಸಂಪನ್ಮೂಲ ಶಿಕ್ಷಕ ಬಿ.ರವೀಶ್ ಕುಮಾರ್, ಸಂಪನ್ಮೂಲ ವ್ಯಕ್ತಿಗಳಾದ ವೆಂಕಟೇಶ್ ಲಕ್ಷಾಣಿ, ಪಿ.ಅಶ್ವತ್ಥ ನಾರಾಯಣ, ರಂಗನಾಥ್ ವಾಲ್ಮೀಕಿ, ಟಿ.ಎಂ.ಬಸವರಾಜು, ಎಂ.ಡಿ.ಪಡಂದಾರ್, ಸಿದ್ದಪ್ಪಬಿದಿರಿ, ಈರಪ್ಪ ಮಹಾಲಿಂಗಪೂರ, ಜಿಲ್ಲಾ ಕನ್ನಡ ಭಾಷಾ ಶಿಕ್ಷಕರ ವೇದಿಕೆ ಅಧ್ಯಕ್ಷ ಡಿ.ಎನ್. ಗೋವಿಂದಪ್ಪ,ಸಿರಿಗನ್ನಡ ನುಡಿ ಬಳಗದ ಅಧ್ಯಕ್ಷ ಎಸ್.ಎಂ.ಕಾಮೇಗೌಡ ಇದ್ದರು.

ಆರೋಗ್ಯ ರಕ್ಷಣೆಯೇ ರೆಡ್‌ಕ್ರಾಸ್‌ಸಂಸ್ಥೆಯ ಧ್ಯೇಯ

ಪೀಪಲ್ ಟ್ರೀ ಹಾಸ್ಪಿಟಲ್ಸ್
ಉಚಿತ ಬೃಹತ್ ಆರೋಗ್ಯ ತಪಾಸಣೆ ಶಿಬಿರ

ಹಿರಿಯೂರು

ಪ್ರತಿಯೊಬ್ಬ ಜನಸಾಮಾನ್ಯರ ಆರೋಗ್ಯ ರಕ್ಷಣೆ ಆಗಬೇಕೆಂಬ ಸದುದ್ದೇಶ ಹೊಂದಿರುವ ಹಿರಿಯೂರು ರೆಡ್‌ಕ್ರಾಸ್ ಸಂಸ್ಥೆ ಹಾಗೂ ಪದಾಧಿಕಾರಿಗಳು ನಿಸ್ವಾರ್ಥ ಸೇವೆಗಳೊಂದಿಗೆ ಆರೋಗ್ಯಸೇವೆಗಳೊಂದಿಗೆ ಆರೋಗ್ಯ ಸೇವೆಗಳನ್ನು ಜನರಿಗೆ ನೀಡುವಲ್ಲಿ ಸದಾ ಮುಂದೆ ಇರುವುದಾಗಿ ತಾಲ್ಲೂಕು ಭಾರತ್ ಸ್ಕೌಟ್ ಅಂಡ್ ಗೈಡ್ಸ್ ಅಧ್ಯಕ್ಷರು ಹೆಚ್.ಎಸ್.ಸುಂದರ್‌ರಾಜ್ ಹೇಳಿದರು.

ಅವರು ನಗರದ ತಾಹಾ ಪ್ಯಾಲೇಸ್‌ನಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಇನ್ನರ್‌ವ್ಹೀಲ್ ಕ್ಲಬ್ ತಾಹಾ ಎಜುಕೇಷನಲ್ ಅಂಡ್ ರೂರಲ್ ಡೆವಲಪ್‌ಮೆಂಟ್ ಚಾರಿಟಬಲ್ ಟ್ರಸ್ಟ್ ಮತ್ತು ಬೆಂಗಳೂರಿನ ಗೊರೆಗುಂಟಪಾಳ್ಯದ ಪೀಪಲ್ ಟ್ರೀ ಹಾಸ್ಪಿಟಲ್ ಇವರ ಸಂಯುಕ್ತಾಶ್ರಯದಲ್ಲಿ ನಡೆಸಿದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ಆರೋಗ್ಯ ಶಿಬಿರಗಳು ಯಶಸ್ವಿಯಾಗಿ ನಡೆಯಲು ಪ್ರತಿಯೊಬ್ಬರ ಸಹಕಾರ ಇದ್ದರೆ ಮಾತ್ರ ಸಾಧ್ಯ ಎಂಬುದಾಗಿ ಹೇಳಿದರು.

ರಾಜ್ಯ ರೆಡ್‌ಕ್ರಾಸ್ ಸಂಸ್ಥೆ ಸದಸ್ಯರಾದ ಎಸ್. ವೀರೇಶ್ ಮಾತನಾಡಿ, ಈ ಭಾಗದ ರೆಡ್‌ಕ್ರಾಸ್ ಸಂಸ್ಥೆ ದುರ್ಬಲರ ಆರೋಗ್ಯ ರಕ್ಷಣೆಗಾಗಿ ಪ್ರತಿಷ್ಠಿತ ಪೀಪಲ್‌ಟ್ರೀ ಆಸ್ಪತ್ರೆಯ ವ್ಯವಸ್ಥಾಪಕರಾದ ಡಾ||ಚಂದ್ರಶೇಕರ್‌ಚಿಕ್ಕಮುನಿಯಪ್ಪ ಮತ್ತು ತಂಡದವರಿಂದ ಆರೋಗ್ಯ ತಪಾಸಣೆ ನಡೆಸಿರುವುದು ಸಂತೋಷ ತಂದಿದೆ ಎಂದರು.

ಡಾ||ವೈಶಾಖ್ ಮೂಳೆರೋಗ ತಜ್ಞರು ಮಾತನಾಡಿ, ಪ್ರತಿಯೊಬ್ಬರು ಆರೋಗ್ಯವಂತರಾಗಿರಲು ಬೆಳಿಗ್ಗೆ ಸಂಜೆಯಲ್ಲಿ ಯೋಗ, ಜಾಗಿಂಗ್, ವಾಕಿಂಗ್, ಮಾಡುವುದಲ್ಲದೆ ತಾವು ತೆಗೆದುಕೊಳ್ಳುವ ಆಹಾರವು ಪೌಷ್ಠಿಕಾಂಶಗಳು ದೊರೆಯುವಂತಹ ಸಿರಿಧಾನ್ಯಗಳನ್ನು ಸೇವನೆ ಮಾಡಬೇಕು. ಯಾವುದೇ ಖಾಯಿಲೆಗಳು ಬಂದಾಗ ಅಲಕ್ಷಿಸುವುದು ಬೇಡ, ಮತ್ತು ಕೂಡಲೇ ವೈದ್ಯರ ಸಲಹೆಗಳನ್ನು ಪಡೆಯಲು ಕೋರಿದರು.

ಭಾರತೀಯ ರೆಡ್‌ಕ್ರಾಸ್ ಚೇರ್ಮನ್ ಬಿ.ಎಸ್.ನವಾಬ್‌ಸಾಬ್ ಮಾತನಾಡಿ, ಜನರ ಸೇವೆ ಮಾಡಿದಾಗ ದೇವರು ಸಂತೋಷ ಪಡುತ್ತಾನೆ. ಮಾನವ ಸೇವೆ ಜನಾರ್ದನ ಸೇವೆ ಎಂಬಂತೆ ನಮ್ಮ ಸಂಸ್ಥೆಗಳು ಆರೋಗ್ಯವಂತ ಸಮಾಜದ ಕಡೆಗೆ ಹೆಚ್ಚು ಗಮನ ನೀಡುತ್ತದೆ. ನಮ್ಮ ಯಾವುದೇ ಶಿಬಿರಗಳನ್ನು ನೀವೆಲ್ಲರು ಸದ್ಬಳಕೆ ಮಾಡಿಕೊಳ್ಳಲು ಕೋರಿದರಲ್ಲದೆ ಈ ದಿನದ ಶಿಬಿರದ ದಾನಿಗಳಾದ ನಂಜುಂಡಸ್ವಾಮಿ ಮತ್ತು ಕುಟುಂಬದವರು ಮಾಲೀಕರು ಸಾರಟೋಟಲ್ ಗ್ಯಾಸ್‌ಬಂಕ್ ಇವರನ್ನು ಅಭಿನಂದಿಸಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ರೆಡ್ ಕ್ರಾಸ್ ಚೇರ್ಮನ್ ಮಹೇಂದ್ರನಾಥ್, ಡಾ||ಅರುಣ್‌ಯಾದವ್, ಇನ್ನರ್‌ವ್ಹೀಲ್ ಅಧ್ಯಕ್ಷರು ಪದ್ಮಜಾಎಂ.ಶೆಟ್ಟಿ, ಕಾರ್ಯದರ್ಶಿ ಸರ್ವಮಂಗಳಾ, ಸುಚಿತ್ರಾ, ತಾಹಾ ಎಜುಕೇಷನ್‌ನ ಮಹಮ್ಮದ್‌ನಾಜೀಮ್, ರೆಡ್ ಕ್ರಾಸ್‌ನ ಎಂ.ಎಸ್.ಸೌಭಾಗ್ಯವತೀದೇವರ್, ಬಿ.ಕೆ.ನಾಗಣ್ಣ, ಕೆ.ಎಸ್.ಮಹಾಬಲೇಶ್ವರಶೆಟ್ಟಿ, ಎಂ..ಎಸ್.ರಾಘವೇಂದ್ರ, ಪಿ.ಆರ್. ಸತೀಶ್‌ಬಾಬು, ದೇವರಾಜ್‌ಮೂರ್ತಿ, ಹೇಮದಳರವೀಂದ್ರನಾಥ್, ಮಧುಸೂಧನ್, ಎಸ್.ಜೋಗಪ್ಪ, ಬಸವರಾಜ್, ಸಂತೋಷ್, ಮೂಳೆ, ಕೀಲು, ಮಧುಮೇಹ, ರಕ್ತದೊತ್ತಡ, ಕಣ್ಣಿನಪೊರೆ, ಫಿಸಿಯೋಥೆರಫಿ, ಹಲ್ಲು, ಮತ್ತು ಬಾಯಿಯ ಕ್ಯಾನ್ಸರ್‌ಗಳನ್ನು ತಪಾಸಣೆ ನಡೆಸಿದ ತಜ್ಞ ವೈದ್ಯರು ಮತ್ತು ಸಿಬ್ಬಂದಿ, ಈ ಆರೋಗ್ಯ ಶಿಬಿರದಲ್ಲಿ ಸುಮಾರು 275 ಜನರು ತಪಾಸಣೆಯನ್ನು ನಡೆಸಿಕೊಂಡರು.

ಭವ್ಯ ಭವಿಷ್ಯದ ಹಿಂದೆ ಇತಿಹಾಸದ ಪರಿಶ್ರಮ-ಪರಾಕ್ರಮ ಇದೆ

ಚಳ್ಳಕೆರೆ

ನಾಡಿನ ಬಹುತೇಕ ಜನರ ಬದುಕು ನಮ್ಮ ಇತಿಹಾಸದ ಮೇಲೆಯೇ ಅವಲಂಬಿತವಾಗಿದೆ. ಇತಿಹಾಸ ನಮ್ಮ ಇಂದಿನ ಬದುಕಿಗೆ ಹೆಚ್ಚು ಅರ್ಥವನ್ನು ನೀಡುತ್ತದೆ. ಕಾರಣ ಇತಿಹಾಸವಿಲ್ಲದೆ ನಮ್ಮ ಬದುಕಿಲ್ಲ, ಇತಿಹಾಸವನ್ನು ಅರಿಯದೆ ಬದುಕಲು ಸಾಧ್ಯವಿಲ್ಲ, ಅದ್ದರಿಂದ ಇತಿಹಾಸವೂ ಸಹ ನಮ್ಮ ಬದುಕಿನ ಒಂದು ಪ್ರಮುಖ ಭಾಗವೆಂದು ಕನ್ನಡ ವಿಶ್ವವಿದ್ಯಾಲಯದ ಉಪ ಕುಲಸಚಿವ ಡಾ.ಎಸ್.ವೈ.ಸೋಮಶೇಖರ್ ತಿಳಿಸಿದರು.

ಅವರು ಸೋಮವಾರ ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ರಾಜ್ಯ ಪತ್ರಗಾರ ಇಲಾಖೆ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ರಾಜ್ಯದ ಬಹುತೇಕ ಪ್ರಾಂತಗಳು ರಾಜರ ಆಡಳಿತಕ್ಕೆ ಒಳಪಟ್ಟಿದ್ದು, ಅಂದು ಎಲ್ಲಾ ಜನರು ಅತ್ಯಂತ ನೆಮ್ಮದಿಯ ಜೀವನವನ್ನು ಸಾಗಿಸುತ್ತಿದ್ದರು. ರಾಜರ ತೀರ್ಮಾನವೇ ಅಂತಿಮವಾಗಿತ್ತು. ಚಿತ್ರದುರ್ಗ ಜಿಲ್ಲೆಯಲ್ಲಿ ಆಳಿದ ವೀರಮದಕರಿ ನಾಯಕ ಬಹಳ ಪರಾಕ್ರಮಿಯಾಗಿದ್ದು, ಹೇರಳವಾದ ಸಂಪತ್ತು ಇಂದಿಗೂ ಚಿತ್ರದುರ್ಗ ಬಹುತೇಕ ಕೋಟೆ ಪ್ರಾಂತಗಳಲ್ಲಿ ಅಡಗಿದೆ ಎಂಬ ಮಾಹಿತಿ ಇದೆ. ಆದರೆ, ಇದರ ಜೊತೆಗೆ ಅನೇಕ ಕುರುಹುಗಳನ್ನು ಸಹ ನಾವು ಕಾಣಬಹುದಾಗಿದೆ. ನಮ್ಮ ಬದುಕಿಗೆ ಹೊಸ ಶಕ್ತಿಯನ್ನು ತುಂಬುವ ಚರಿತ್ರೆಯ ಕುರುಹುಗಳನ್ನು ಸಂರಕ್ಷಿಸಲು ನಾವೆಲ್ಲರೂ ಮುಂದಾಗಬೇಕು ಎಂದರು.

ವಿಶೇಷವಾಗಿ ಗ್ರಾಮದ ಹೆಸರು, ದೇವಸ್ಥಾನದ ಹೆಸರು, ಗಡಿಕಲ್ಲು, ವೀರಗಲ್ಲು, ಮಾಸ್ತಿಗಲ್ಲು, ವಾಸ್ತುಶಿಲ್ಪವನ್ನು ಒಳಗೊಂಡ ದೇವಾಲಯ ಕತ್ತಿ, ಗುರಾಣಿ, ಶಾಸನ, ನಾಣ್ಯ, ಸ್ಮಾರಕ ಭವನ ಇವುಗಳೆಲ್ಲೂ ಪ್ರಾಚೀನ ಕಾಲದ ಮಹಾರಾಜರ ಆಳ್ವಿಕೆಯ ಕುರುಹುಗಳಾಗಿದ್ದು, ಇವುಗಳನ್ನು ವೀಕ್ಷಿಸಿದಾಗ ಮಾತ್ರ ನಮಗೆ ಅವರ ಪರಾಕ್ರಮದ ಬಗ್ಗೆ ಅವರ ಬದುಕಿನ ಬಗ್ಗೆ ಕುತೂಹಲ ಹಾಗೂ ಕೌತುಕ ಉಂಟಾಗುತ್ತದೆ. ಅದ್ದರಿಂದ ಪ್ರತಿಯೊಬ್ಬರೂ ಸಹ ಇತಿಹಾಸವನ್ನು ಅರಿಯುವತ್ತ ಸಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಪನ್ಯಾಸಕ ರವೀಶ್ ವಹಿಸಿದ್ದರು. ಉಪನ್ಯಾಸಕರುಗಳಾದ ಗೆಜ್ಜಪ್ಪ, ಶಿವಪ್ಪ, ಗುರುಸಿದ್ದಮೂರ್ತಿ, ಡಾ.ಬಿ.ಟಿ.ಚಾರುಲತಾ ಮುಂತಾದವರು ಭಾಗವಹಿಸಿದ್ದರು.

ಅಂಗವಿಕಲರಿಗೆ ವಿವಿಧ ಸೌಲಭ್ಯ: ವೈಶಾಲಿ

ಚಿತ್ರದುರ್ಗ

ಜಿಲ್ಲೆಯಲ್ಲಿ 2011ರ ಜನಗಣತಿ ಪ್ರಕಾರ 35971 ವಿಕಲಾಂಗರಿದ್ದು, ಇವರು ಮುಖ್ಯವಾಹಿನಿಗೆ ಬರಲು ವಿವಿಧ ರೀತಿಯ ಸೌಕರ್ಯಗಳನ್ನು ನೀಡಲಾಗಿದೆ ಎಂದು ಜಿಲ್ಲಾ ವಿಕಲಕಲ್ಯಾಣಾಧಿಕಾರಿ ವೈಶಾಲಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ 6196 ಜನ ದೃಷ್ಟಿ ದೋಷ, 3096 ಶ್ರವಣ ದೋಷ, 2880 ಮಾತಿನ ದೋಷ, 415 ಮಾನಸಿಕ ಅಸ್ವಸ್ಥರು, 2461 ಬುದ್ಧಿಮಾಂದ್ಯರು, 8373 ದೈಹಿಕ ಅಂಗವಿಕಲರು, 2961 ಬಹು ಬುದ್ದಿಮಾಂದ್ಯರು ಮತ್ತು 6579 ಬಹು ವಿಧ ವಿಕಲಾಂಗರಿದ್ದಾರೆ.

ಬಡ ಅಂಗವಿಕಲರಿಗೆ ನ. 17ರ ಅಂತ್ಯಕ್ಕೆ 500 ರೂ.ಗಳನ್ನು 16456 ಮತ್ತು 1200 ರೂ.ಗಳನ್ನು 14829 ಜನ ಸೇರಿದಂತೆ 31285 ಜನರಿಗೆ ನೀಡಲಾಗಿದ್ದು, ವಿದ್ಯಾರ್ಥಿ ವೇತನದಡಿಯಲ್ಲಿ 2016-17ನೇ ಸಾಲಿನಲ್ಲಿ 23.56 ಲಕ್ಷ ರೂ ವೆಚ್ಚದಲ್ಲಿ 1231 ವಿದ್ಯಾರ್ಥಿಗಳಿಗೆ ನೀಡಲಾಗಿದ್ದು, ಪ್ರತಿಭಾವಂತ ವಿಕಲಾಂಗರಿಗೆ 2016-17ನೇ ಸಾಲಿಗೆ 1.20 ಲಕ್ಷರೂ.ಗಳನ್ನು 26 ವಿದ್ಯಾರ್ಥಿಗಳಿಗೆ ಪ್ರೋತ್ಸಾಗಧನವಾಗಿ ವಿತರಣೆ ಮಾಡಲಾಗಿದೆ.

2016-17ನೇ ಸಾಲಿನಲ್ಲಿ ಸುಮಾರು 3 ಲಕ್ಷ ರೂ.ಗಳ ವೆಚ್ಚದಲ್ಲಿ 90 ಫಲಾನುಭವಿಗಳಿಗೆ ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ನೀಡಲಾಗಿದ್ದು, ಅಧಾರಸಾಲ ಯೋಜನೆಯಡಿ 10.20 ಲಕ್ಷ ರೂ.ವೆಚ್ಚದಲ್ಲಿ 30 ಫಲಾನುಭವಿಗಳಲ್ಲಿ ಪ್ರತಿ ಫಲಾನುಭವಿಗಳಿಗೆ 15,000 ರೂ. ಮೊತ್ತದ ಕಬ್ಬಿಣದ ಗೂಡಂಗಡಿ ಮತ್ತು 20 ಸಾವಿರ ರೂಗಳನ್ನು ಹೂಡಿಕೆ ಬಂಡವಾಳವಾಗಿ ನೀಡಲಾಗಿದೆ. ಇದೇ ಸಾಲಿನಲ್ಲಿ 1.20 ಲಕ್ಷ ರೂ. ಅನುದಾನದಲ್ಲಿ 3 ಫಲಾನುಭವಿಗಳಿಗೆ ವ್ಯದ್ಯಕೀಯ ವೆಚ್ಚವನ್ನು ನೀಡಲಾಗಿದೆ.

ನಿರಾಮಯ ಯೋಜನೆಯಡಿ 28 ಸಾವಿರದಲ್ಲಿ 113 ಫಲಾನುಭವಿಗಳಿಗೆ ವಿಮಾ ಸೌಲಭ್ಯವನ್ನು ಮಾಡಿಸಲಾಗಿದೆ. ವಿಕಲಚೇತನ ವ್ಯಕ್ತಿಯನ್ನು ಸಾಮಾನ್ಯ ವ್ಯಕ್ತಿವಿವಾಹದಡಿಯಲ್ಲಿ 57 ಫಲಾನುಭವಿಗಳಿಗೆ 28.50 ಲಕ್ಷ ರೂ.ಗಳನ್ನು ನೀಡಲಾಗಿದೆ. ಉನ್ನತ ಶಿಕ್ಷಣವನ್ನು ಪಡೆಯುತ್ತಿರುವ 73 ಫಲಾನುಭವಿಗಳಿಗೆ 1 ಲಕ್ಷ ರೂ. ಮೌಲ್ಯದ ಶುಲ್ಕ ಮರುಪಾವತಿ ಮಾಡಲಾಗಿದೆ.

ಅಂದ ಮಹಿಳೆಯರಿಗೆ ಜನಿಸುವ ಮಕ್ಕಳ ಶಿಶು ಪಾಲನೆ ಭತ್ಯೆಯಾಗಿ ಜಿಲ್ಲೆಯಲ್ಲಿ ಇಬ್ಬರು ಫಲಾನುಭವಿಗಳಿಗೆ 36 ಸಾವಿರ ರೂ.ಗಳನ್ನು ನೀಡಲಾಗಿದೆ. ಇದ್ದಲ್ಲದೆ ಈ ಸಾಲಿನಲ್ಲಿ 48 ಜನರಿಗೆ ಯಂತ್ರ ಚಾಲಿತ ದ್ವಿಚಕ್ರವಾಹನವನ್ನು ವಿತರಣೆ ಮಾಡಲಾಗಿದೆ.

ಪ್ರಜಾ ಪ್ರಗತಿ ಓದಿರಿ ಪ್ರಗತಿ ಟಿವಿ ವೀಕ್ಷಿಸಿ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ತುಮಕೂರು ಜಿಲ್ಲೆ, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು,
ಜಿಲ್ಲಾ ಸರ್ವೇಲೆನ್ಸ್ ಘಟಕ, ತುಮಕೂರು ಜಿಲ್ಲೆ, ತುಮಕೂರು
ದೂರವಾಣಿ: 0816-2260594,
ಇ-ಮೇಲ್: **dsotumkur@gmail.com; dhotumkur@gmail.com**
ಸಂಖ್ಯೆ: ಜಿಆ&ಕುಕಸಂ/ಐಡಿಎಸ್‌ಪಿ/ತು/01/2017-18 ದಿನಾಂಕ: 30.11.2017

ಸಂಕ್ಷಿಪ್ತ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲಾ ಸರ್ವೇಲೆನ್ಸ್ ಕಛೇರಿಯ ಮುಂದಿನ ವಾರ್ಷಿಕ ಅವಧಿಗೆ ಪ್ರಯೋಗಶಾಲಾ ಉಪಕರಣಗಳನ್ನು ಅಧಿಕೃತ ಪ್ರಾಧಿಕಾರದಿಂದ ನೊಂದಾಯಿತ ಕಂಪನಿಗಳು/ತಯಾರಕರು/ಸಾರ್ವಜನಿಕ ಹಾಗೂ ಖಾಸಗಿ ಕಂಪನಿಗಳು/ಪ್ರಧಾನ ಹಂಚಿಕೆದಾರರು/ವಿತರಕರು/ಮಾರಾಟಗಾರರು ಇವರುಗಳಿಂದ ಸರಬರಾಜು ಮಾಡಲು ಎರಡು ಲಕೋಟೆ ಪದ್ಧತಿಯನ್ವಯ ಕರ್ನಾಟಕ ಪಾರದರ್ಶಕ ನಿಯಮ 1999-2000ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಟೆಂಡರ್ ಕರೆಯಲಾಗಿದೆ. ಅರ್ಹ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in/** ಮುಖಾಂತರ ಮರು ಟೆಂಡರ್‌ನಲ್ಲಿ ಭಾಗವಹಿಸಬಹುದು.

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಈ ಕೆಳಗಿನಂತಿದೆ: (1) ಇ-ಪೋರ್ಟಲ್‌ನಲ್ಲಿ ಮರು ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ: **ದಿನಾಂಕ: 04.12.2017 ಸಂಜೆ 4.00 ಗಂಟೆ ನಂತರ.** (2) ಮರು ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಕಾಲ: **18.12.2017 (ಸಮಯ ಸಂಜೆ 4.00 ಗಂಟೆ).** (3) ಮರು ಟೆಂಡರ್ ತೆರೆಯುವ ದಿನಾಂಕ ಮತ್ತು ಕಾಲ (ತಾಂತ್ರಿಕ ಬಿಡ್): **19.12.2017 (ಸಮಯ ಸಂಜೆ 4.00 ಗಂಟೆ).** (4) ಮರು ಟೆಂಡರ್ ತೆರೆಯುವ ದಿನಾಂಕ ಮತ್ತು ಕಾಲ (ಆರ್ಥಿಕ ಬಿಡ್): **20.12.2017ರ ನಂತರ.** (5) ಇಎಂಡಿ ಮೊತ್ತ: **ರೂ.10,250/-** (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸುವುದು).

ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಸರ್ವೇಲೆನ್ಸ್ ಅಧಿಕಾರಿಗಳ ಕಛೇರಿ, ತುಮಕೂರು ಇಲ್ಲಿ ಕಛೇರಿಯ ವೇಳೆಯಲ್ಲಿ (ದೂ: 0816-2260594) ಮಾಹಿತಿ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾ ಸರ್ವೇಲೆನ್ಸ್ ಅಧಿಕಾರಿಗಳು, ತುಮಕೂರು ಜಿಲ್ಲೆ
ವಾ.ಸಾ.ಇ./ ತುಮಕೂರು/09 / ಎಂಸಿಎ/ 2017-18

ಚೌಡಯ್ಯ ನಿರ್ಭಿಡೆಯ ಸಮಾಜ ಸುಧಾರಕ

ರಾಣೆಬೆನ್ನೂರ

ವಚನಕಾರರಲ್ಲಿ ಶ್ರೇಷ್ಠರಾಗಿ, ಸಮಾಜದಲ್ಲಿನ ಅಂಕು ಡೊಂಕು ತಿದ್ದುವದರ ಮೂಲಕ ವೈಚಾರಿಕ ಕ್ರಾಂತಿ ಹರಿಸಿದ ಅಂಬಿಗರ ಚೌಡಯ್ಯನವರು ವಚನಕಾರರಿಗೆ ಪ್ರಜ್ವಲವಾಗಿ ಬೆಳಗುವ ಧೃವತಾರೆಯಾಗಿ ಎಲ್ಲರ ಮೈನಗಳಲ್ಲಿ ನಿಲ್ಲುವಂತೆ ಮಾಡಿದ್ದಾರೆ ಎಂದು ನಿಜಶರಣ ಅಂಬಿಗರ ಚೌಡಯ್ಯನ ಗುರು ಪೀಠದ ಪೀಠಾಧಿಪತಿ ಶಾಂತಭೀಷ್ಮ ಚೌಡಯ್ಯ ಮಹಾಸ್ವಾಮಿಗಳು ಹೇಳಿದರು.

ರವಿವಾರದಂದು ತಾಲೂಕಿನ ಚೌಡಯ್ಯದಾನಪುರ ಸಮೀಪದ ನರಶೀಪುರ ಚೌಡಯ್ಯನ ಪೀಠದಲ್ಲಿ ನಡೆದ 66ನೇ ಹುಣ್ಣಿಮೆಯ ಶಿವಾನುಭವ ಗೋಷ್ಠಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಅತ್ಯಂತ ನಿರ್ಭಿಡೆಯ ಸಮಾಜ ಸುಧಾರಕ, ಆಧ್ಯಾತ್ಮಿಕ ಅನುಭಾವಿಯಾಗಿದ್ದ ಚೌಡಯ್ಯ ಮೂಲತಹ ನಿಜಶರಣರಾಗಿದ್ದರು. ಆತನಲ್ಲಿ ಬಸವಣ್ಣನವರ ವೈಚಾರಿಕತೆ, ಅಲ್ಲಮಪ್ರಭುವಿನ ಅನುಭಾವಿಕ ನಿಲುವು ಬೆರೆತು-ವಿಶಿಷ್ಟ ಅನುಭವ ಮತ್ತು ಅನುಭಾವಗಳೆರಡೂ ಸೇರಿ ಮಹಾತ್ಮನೆನಿಸಿಕೊಂಡಿದ್ದಾರೆ, ಅವರು ನಮಗೆ ದಾರಿ ದೀಪ ಎಂದು ಶ್ರೀಗಳು ನುಡಿದರು.

ಬಸವಣ್ಣನವರ ಸಮಕಾಲಿನರಾಗಿ ಕನ್ನಡ ಸಾಹಿತ್ಯದಲ್ಲಿ ಬಂಡಾಯದ ಮೊದಲ ಹೆಜ್ಜೆಗಳನ್ನು ಅತ್ಯಂತ ಸ್ಪಷ್ಟವಾಗಿ ಚಾಪಿಸಿದ ವಚನಕಾರರಾಗಿದ್ದರು. ಬಸವಣ್ಣನವರ ವಚನ ಚಳುವಳಿಗೆ ಮುಖ್ಯ ಆಧಾರ ಸ್ತಂಭಗಳಾಗಿದ್ದ ಅವರು ಇತರ ಕೆಳ ವರ್ಗಗಳ ಶರಣರು ಮೂಕರಾಗುವಂತೆ ಮಾಡಿದ್ದ ಸಮಯದಲ್ಲಿ ಬಸವಣ್ಣನವರ ಪ್ರಭಾವ ಪ್ರೇರಣೆಯಿಂದ ತುಳಿತಕ್ಕೆ ಒಳಗಾದ ಜನರಿಗೆ ಸತ್ವಶಾಲಿಯಾದ ವಚನಗಳನ್ನು ನೀಡಿ ಅವರು ದಾರಿದೀಪವಾಗಿದ್ದರು ಎಂದರು.

ಡಾ. ಪೂರ್ಣಾನಂದ, ಮಂಜುನಾಥ ಭೋವಿ, ಹೊನ್ನಪ್ಪ ತಿಮ್ಮೇನಹಳ್ಳಿ, ಪ್ರವೀಣ ವಡ್ನಿಕೊಪ್ಪ, ಕೃಷ್ಣಮೂರ್ತಿ ವಡ್ನಿಕೊಪ್ಪ, ಪರಶುರಾಮ ಸೋನ್ನದ, ಗೂರಪ್ಪ ಜಿದ್ದಿ, ಪ್ರಶಾಂತ, ಶಂಕರ ಮ್ಯಾಗೇರಿ, ಅಶೋಕ ವಾಲಿಕಾರ, ಪ್ರಕಾಶ ಸೋನ್ನದ, ಎಚ್.ಎಮ್.ದಂಡಿನ, ಕೆ.ಎಸ್.ನೀಲಪ್ಪನವರ, ರಾಮಚಂದ್ರ ಐರಣಿ, ಬಿ.ರಾಮಪ್ಪ, ರಾಜಪ್ಪ ಅಂಬಿಗೇರ, ಮಾಲತೇಶ ಕೆಂಚನಹಳ್ಳಿ ಇದ್ದರು.

ಜಿಲ್ಲಾ ಆರೋಗ್ಯ ಮತ್ತು ಕು.ಕ.ಸಂಘ ತುಮಕೂರು (ರಿ.)
ಜಿಲ್ಲಾ ಸರ್ವೇಕ್ಷಣಾ / ಎನ್.ಸಿ.ಡಿ ಘಟಕ,ತುಮಕೂರು ಜಿಲ್ಲೆ, ತುಮಕೂರು.
ದೂರವಾಣಿ: 0816-2260594; E-Mail: ncdtumkur@gmail.com
ಸಂ : ಜಿ.ಸ.ಕ./ಎನ್.ಸಿ.ಡಿ.ಘ.ತು/ 73 /2017-18 ದಿನಾಂಕ: 29.11.2017

ಪ್ರಕಟಣೆ

ಎನ್.ಪಿ.ಸಿ.ಡಿ.ಸಿ.ಎಸ್.ಎನ್.ಪಿ.ಎಚ್.ಸಿ.ಇ, ಎನ್‌ವಿಬಿಡಿಸಿಪಿ ಮತ್ತು ಎನ್.ಪಿ.ಪಿ.ಸಿ.ಡಿ ಕಾರ್ಯಕ್ರಮದಡಿಯಲ್ಲಿ ನೇರ ಸಂದರ್ಶನದ ಮೂಲಕ ಖಾಲಿ ಇರುವ ಈ ಕೆಳಕಂಡ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಷರತ್ತು ಮತ್ತು ನಿಬಂಧನೆಗೊಳಪಟ್ಟು ಮೀಸಲಾತಿ ಮತ್ತು ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ	ಅನುಭವ	ಒಟ್ಟು ಹುದ್ದೆ	ಸಂಚಿತ ವೇತನ	ವಯೋಮಿತಿ
1	Specialist cardiology/ General Medicine (District CCU)	M.D in Medicine + Endocrinology Or Cardiology ಯಲ್ಲಿ ವಿಶೇಷ ತರಬೇತಿ (ಅಪೇಕ್ಷಣೀಯ)	ತಜ್ಞರಾಗಿ ಆಸ್ಪತ್ರೆಯಲ್ಲಿ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ	01	94,500/-	50 ವರ್ಷ
2	ಜೆನರಲ್ ಫಿಜಿಷಿಯನ್ (ಜಿಲ್ಲಾ ಎನ್.ಸಿ.ಡಿ. ಕ್ಲಿನಿಕ್)	ಎಂಡಿ ಇನ್ ಜೆನರಲ್ ಮೆಡಿಸಿನ್	ಯಾವುದಾದರೂ ಆಸ್ಪತ್ರೆಯಲ್ಲಿ 03 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	01	73,500/-	40 ವರ್ಷ
3	ಕನ್ಸಲೆಂಟ್ ಮೆಡಿಸನ್ ಎನ್.ಪಿ.ಎಚ್.ಸಿ.ಇ ಜಿಲ್ಲಾ ಘಟಕ	ಎಂ.ಡಿ. (M.D) ಇನ್ ಜನರಲ್ ಮೆಡಿಸಿನ್ ಅಥವಾ ಎಮ್.ಬಿ.ಬಿ.ಎಸ್	ತಜ್ಞರಾಗಿ ಆಸ್ಪತ್ರೆಯಲ್ಲಿ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	02	50,000/- (ಎಂಡಿ) 44,000/- (ಎಮ್.ಬಿ.ಬಿ.ಎಸ್.)	50 ವರ್ಷ
4	ಸಾಮಾನ್ಯ ಕರ್ತವ್ಯ ವೈದ್ಯರು (ಸಮುದಾಯ ಆರೋಗ್ಯ ಕೇಂದ್ರಕ್ಕೆ)ಎನ್.ಸಿ.ಡಿ ವಿಭಾಗ	ಎಮ್.ಬಿ.ಬಿ.ಎಸ್.	ಯಾವುದಾದರು ಆಸ್ಪತ್ರೆಯಲ್ಲಿ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	08	44,000/-	40 ವರ್ಷ
5	ಶುಶ್ರೂಷಕಿಯರು - 01 ಜಿಲ್ಲಾ ಆಸ್ಪತ್ರೆಗೆ-01(ಸಿಸಿಯು) ಸಾ. ಆಸ್ಪತ್ರೆ -01 ಮತ್ತು ಸ.ಆ.ಕೇಂದ್ರಕ್ಕೆ -01 (ತುರುವೇಕೆರೆ, ವೈ.ಎನ್.ಹೊಸಕೋಟೆ) ಮೀಸಲಾತಿ-1) 3 B ಮ.ಅ-01,2)2 B ಮ.ಅ-01, 3)ಪ.ಜಾ ಸಾಮಾನ್ಯ-01	ಬಿ.ಎಸ್.ಸಿ.ನರ್ಸಿಂಗ್ (ಅಪೇಕ್ಷಣೀಯ) / ಡಿಪ್ಲೋಮ ನರ್ಸಿಂಗ್	02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	03	10,000/-	40ವರ್ಷ
6	ಪ್ರಯೋಗ ಶಾಲಾ ಟೆಕ್ನಾಲಾಜಿಸ್ಟ್-(ಸಾ ಆಸ್ಪತ್ರೆ ಚಿ.ನಾ.ಹಳ್ಳಿಗೆ)ಮೀಸಲಾತಿ - **1)2-A- ಮ ಅ-01**	ಪಿ.ಯು.ಸಿ + ಡಿ.ಎಂ.ಎಲ್.ಟಿ.	02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ ಮತ್ತು ಕಂಪ್ಯೂಟರ್ ಜ್ಞಾನ.	01	13,200/-	40 ವರ್ಷ
7	ಕೌನ್ಸಿಲರ್(ಸಮುದಾಯ ಆರೋಗ್ಯ ಕೇಂದ್ರಕ್ಕೆ) **-ಮೀಸಲಾತಿ-** **1)2-A- ಮ ಅ-02** **2)ಪ.ಜಾ-ಗ್ರಾ.ಅ-01** **3)ಪ್ರವ- I ಮ.ಅ -01**	ಸೋಷಿಯಲ್ ಸೈನ್ಸ್‌ನಲ್ಲಿ ಪದವಿ /ಡಿಪ್ಲೋಮ ಇನ್ ಕೌನ್ಸಲಿಂಗ್/ ಆರೋಗ್ಯ ಶಿಕ್ಷಣ/ ಸಮೂಹ ಸಂವಹನ	ಆರೋಗ್ಯ ಕ್ಷೇತ್ರದಲ್ಲಿ 02 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	04	13,200/-	40 ವರ್ಷ
8	Rehabilitation Worker **ಮೀಸಲಾತಿ-** 1))ಪ್ರವ-I ಮ.ಅ -01 2) ಪ.ಜಾ-ಮ.ಅ-01, ಗ್ರಾ.ಅ-01, 3)ಪ.ಪಂ-ಮ.ಅ-01, 4) **2-A- ಮಅ-01** 5) ಸಾಮಾನ್ಯ-02	One year certificate course/ Diploma in multi Rehabilitation worker Or B.P.T	ಆಸ್ಪತ್ರೆಯಲ್ಲಿ 01 ವರ್ಷ ಕರ್ತವ್ಯ ನಿರ್ವಹಿಸಿದ ಅನುಭವ.	07	15,000/-	40 ವರ್ಷ
9	ಫೈನಾಷಿಯಲ್ & ಲಾಜಿಸ್ಟಿಕ್ ಅಸಿಸ್ಟಂಟ್ (ಎನ್‌ವಿಬಿಡಿಸಿಪಿ ಕಾರ್ಯಕ್ರಮದಡಿಯಲ್ಲಿ ಅರ್ಹತೆಯ ಮತ್ತು ಅನುಭವದ ಆಧಾರದ ಮೇಲೆ ಆಯ್ಕೆ)	ವಾಣಿಜ್ಯ ಶಾಸ್ತ್ರದಲ್ಲಿ ಪದವೀಧರರಾಗಿರಬೇಕು	ಲೆಕ್ಕ ಪರಿಶೋಧನೆ, ವಿಶ್ಲೇಷಣೆ, ಬಜೆಟ್, ಹಣಕಾಸು ಸಾಫ್ಟ್‌ವೇರ್ ವರದಿ ಮಾಡುವ ವ್ಯವಸ್ಥೆಗಳು, ಕಂಪ್ಯೂಟರ್ ಮತ್ತು ಟ್ಯಾಲಿಯ ಅನುಭವವಿರಬೇಕು. ಸರ್ಕಾರಿ ಸಂಸ್ಥೆಗಳಲ್ಲಿ ಕನಿಷ್ಠ 2 ವರ್ಷಗಳ ಅನುಭವವಿರಬೇಕು.	01	15,000/-	40 ವರ್ಷ
10	Audiologist -**ಮೀಸಲಾತಿ** - GM – OTHERS (ಎನ್.ಪಿ.ಪಿ.ಸಿ.ಡಿ ಕಾರ್ಯಕ್ರಮದಡಿಯಲ್ಲಿ)	Bachelor in Audiology & Spech Language Pathology / B.Sc. from RCI recognized institute.	At least One Year Experience.	01	30,000/-	40 ವರ್ಷ
11	Audiometric Assistant-ಮೀಸಲಾತಿ-GM-OTHERS (ಎನ್.ಪಿ.ಪಿ.ಸಿ.ಡಿ ಕಾರ್ಯಕ್ರಮದಡಿಯಲ್ಲಿ)	Technical Person with one year diploma in Hearing Language and Speech (DHLS) from a RCI recognized Institute.	At least One Year Experience.	01	15,000/-	40 ವರ್ಷ

ಆಸಕ್ತಿ ಹೊಂದಿದ ಅರ್ಹ ಅಭ್ಯರ್ಥಿಗಳು ಜಿಲ್ಲಾ ಸರ್ವೆಲೆನ್ಸ್ ಅಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿ ಸಂಕೀರ್ಣ, 1ನೇ ಮಹಡಿ ರೂಮ್ ನಂಬರ್ 203 ಅಮಾನಿಕೆರೆ ಪಾರ್ಕ್ ಎದುರು, ತುಮಕೂರು ಇಲ್ಲಿ ನಡೆಯುವ ನೇರ ಸಂದರ್ಶನಕ್ಕೆ ಸಂಬಂಧಪಟ್ಟ ಆಸಕ್ತ ಅಭ್ಯರ್ಥಿಗಳು ಅವಶ್ಯಕ ಪೂರಕ ದಾಖಲೆಗಳೊಂದಿಗೆ (ವಿದ್ಯಾರ್ಹತೆ, ಗ್ರಾಮೀಣ, ಕನ್ನಡ ಮಾಧ್ಯಮ, ಜಾತಿ ಪ್ರಮಾಣ ಪತ್ರ) ಮೂಲ ಮತ್ತು ನಕಲು ಪ್ರತಿಗಳೊಂದಿಗೆ **ದಿನಾಂಕ: 13.12.2017 ರಂದು** ನೇರ ಸಂದರ್ಶನಕ್ಕೆ ಹಾಜರಾಗಲು ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸವನ್ನು ಸಂಪರ್ಕಿಸಿ.

ಸೂಚನೆ: 1) ಮೀಸಲಾತಿ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಮುಂದಿನ ಮೀಸಲಾತಿ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. 2) ಅರ್ಜಿ ನಮೂನೆಯನ್ನು **ಬೆಳಗ್ಗೆ 10.00 ಗಂಟೆಯಿಂದ 01:00 ಗಂಟೆಗೆ** ನಿಗದಿತ ಅರ್ಜಿ ನಮೂನೆ ಪಡೆದುಕೊಳ್ಳವುದು ತದನಂತರ ಬಂದ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಸದಸ್ಯ ಕಾರ್ಯದರ್ಶಿ, ಜಿಲ್ಲಾ ಆಯ್ಕೆ ಸಮಿತಿ ಎನ್.ಪಿ.ಸಿ.ಡಿ.ಸಿ.ಎಸ್./ಎನ್.ಪಿ.ಎಚ್.ಸಿ.ಇ, ತುಮಕೂರು ಜಿಲ್ಲೆ, ತುಮಕೂರು.
ವಾ.ಸಾ.ಇ./ ತುಮಕೂರು/ 12/ ಎಂಸಿಎ/ 2017-18